ಒ ಎಸ್ ನಂ.140/2019

ಪಿ ಡಬ್ಲ್ಯೂ 1

ಸಾಕ್ಷಿಯ ಹೆಸರು : ಎಸ್ ರವಿ

ದಿನಾಂಕ 26.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ – ಪ್ರತಿವಾದಿ 1 ಮತ್ತು 3 ರವರ ಪರ ಶ್ರೀ ಎಸ್ ಎ ಆರ್ ವಕೀಲರಿಂದಃ

1 ನೇ ಪ್ರತಿವಾದಿಯ ತಂದೆಯ ಹೆಸರು ಎ ಎಂ ಮಸಣಶೆಟ್ಟಿ . 1 ನೇ ಪ್ರತಿವಾದಿಯ ತಾತನ ಹೆಸರೂ ಸಹಾ ಮಸಣಶೆಟ್ಟಿ ಎಂದರೆ ಸರಿ.

1 ನೇ ಪ್ರತಿವಾದಿಯ ತಾತನಿಗೆ 5 ಜನ ಗಂಡು ಮಕ್ಕಳು ಅವರು 1 ನೇ ಎ ಎಂ ಮಸಣಶೆಟ್ಟಿ 2 ನೇ ಗುರುನಂಜಶೆಟ್ಟಿ 3 ನೇ ಸಿದ್ದಪ್ಪಸ್ವಾಮಿ 4 ನೇ ನೀಲಸಿದ್ದಶೆಟ್ಟಿ ಅಃ ಚಿಕ್ಕ ಕೂಸು ಹಾಗೂ 5 ನೇ ರಾಚಶೆಟ್ಟಿ ಎಂಬ ಗಂಡು ಮಕ್ಕಳು ಎಂದರೆ ಸರಿ. ರಾಜಮ್ಮ ಮತ್ತು ರತ್ನಮ್ಮ ಹೆಣ್ಣು ಮಕ್ಕಳು ಎಂದರೆ ಸರಿ.

1 ನೇ ಪ್ರತಿವಾದಿಯ ತಾತ ಮಸಣಶೆಟ್ಟಿಗೆ ಯಾವುದೇ ಪಿತ್ರಾರ್ಜಿತ ಸ್ವತ್ತು ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಎ ಎಂ ಮಸಣಶೆಟ್ಟಿ ಯವರು ಮೊದಲ ಮಗನಾಗಿರುತ್ತಾರೆ ಎಂದರೆ ಸರಿ.

ಎ ಎಂ ಮಸಣಶೆಟ್ಟಿಯವರು ಪೋಸ್ಟ್ ಆಫೀಸ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಫಾರೆಸ್ಟ್ ಆಫೀಸ್ ನಲ್ಲಿ ಗಾರ್ಡ್ ಆಗಿದ್ದರು ಎಂದು ನುಡಿಯುತ್ತಾರೆ. ಎ ಎಂ ಮಸಣಶೆಟ್ಟಿಯವರು ತಮ್ಮ ನಿವೃತ್ತಿ ಹಣದಿಂದ ದಾವಾ ಸ್ವತ್ತುಗಳನ್ನು ಸ್ವಂತವಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸಿದ್ದಯ್ಯನಪುರ ಗ್ರಾಮದ ಸರ್ವೆ ನಂಬರ್ 45/ಬಿ2 ಆಸ್ತಿಯು 1 ನೇ ಪ್ರತಿವಾದಿಗೆ ವಾರಸುದಾರಿಗೆ ಮೂಲಕ ಬಂದ ಆಸ್ತಿಯಾಗಿರುತ್ತದೆ ಎಂದರೆ ಸರಿ.

1 ನೇ ಪ್ರತಿವಾದಿಗೆ ಸಿದ್ದಪ್ಪಸ್ವಾಮಿ 1 ನೆ ಪ್ರತಿವಾದಿಗೆ ಚಿಕ್ಕಪ್ಪನಾಗಬೇಕು ಎಂದರೆ ಸರಿ.

ಒ ಎಸ್ ನಂ.140/2019

ಪಿ ಡಬ್ಲ್ಯೂ 1

ಸಾಕ್ಷಿಯ ಹೆಸರು : ಎಸ್ ರವಿ

ಸಿದ್ದಯ್ಯನಪುರ ಗ್ರಾಮದ ಸರ್ವೆ ನಂಬರ್ 40 ರಲ್ಲಿ 60 ಸೆಂಟ್ ಜಮೀನು ಸಿದ್ದಪ್ಪಸ್ವಾಮಿಗೆ ವಿಲ್ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ದಾವಾ ಐಟಂ 2 ಮತ್ತು ದಾವಾ ಐಟಂ 7 ಆಸ್ತಿಗಳನ್ನು 1 ನೇ ಪ್ರತಿವಾದಿಯ ತಾತ ಮಸಣಶೆಟ್ಟಿಯವರು 1 ನೇ ಪ್ರತಿವಾದಿ ಹಾಗೂ ಸಿದ್ದಪ್ಪಸ್ವಾಮಿಗೆ ವಿಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ತಾತನಾದ ಸಿ ಎಂ ಮಸಣಶೆಟ್ಟಿಯವರ ಮರಣ ನಂತರ ದಾವಾ ಐಟಂ 2 ಮತ್ತು 7 ಆಸ್ತಿಯು ಸಿದ್ದಪ್ಪಸ್ವಾಮಿಯವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

ದಾವಾ ಐಟಂ 2 ರ ಸರ್ವೆ ನಂಬರ್ 514/4 ರಲ್ಲಿ 68 ಸೆಂಟ್ ಜಮೀನು ಹಾಗೂ ದಾವಾ ಐಟಂ 7 ರಲ್ಲಿ ಸರ್ವೆ ನಂಬರ್ 40/2 ರಲ್ಲಿ 30 ಸೆಂಟ್ ಜಮೀನನ್ನು 1 ನೇ ಪ್ರತಿವಾದಿಯ ತಂದೆ ಎ ಎಂ ಮಸಣಶೆಟ್ಟಿಯವರಿಗೆ ವಿಲ್ ಮೂಲಕ 1 ನೇ ಪ್ರತಿವಾದಿಯ ತಾತ ನೀಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.

1 ನೇ ಪ್ರತಿವಾದಿಯ ತಾತನಾದ ಸಿ ಎಂ ವಸಣಶೆಟ್ಟಿಯವರು ದಿನಾಂಕಃ 14.08.1993 ರಂದು ಮರಣ ಹೊಂದಿದ ದಿನಾಂಕದಂದು ದಾವಾ ಐಟಂ 2 ಮತ್ತು 7 ರ ಆಸ್ತಿಯು 1 ನೇ ಪ್ರತಿವಾದಿಯ ತಂದೆ ಎಂ ಎಂ ಮಸಣಶೆಟ್ಟಿ ಮತ್ತು ಸಿದ್ದಪ್ಪಸ್ವಾಮಿಯವರಿಗೆ ಬಂದಿರುತ್ತದೆ ಎಂದರೆ ಸರಿ. ದಿನಾಂಕಃ 14.08.1993 ರಿಂದ ಇಲ್ಲಿಯವರೆಗೂ ಎ ಎಂ ಮಸಣಶೆಟ್ಟಿ ಹಾಗೂ ಸಿದ್ದಪ್ಪಸ್ವಾಮಿ ದಾವಾ ಐಟಂ 2 ಮತ್ತು ದಾವಾ ಐಟಂ 7 ರಲ್ಲಿ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಹಾಗೂ ಸಿದ್ದಪ್ಪಸ್ವಾಮಿಯು ದಾವಾ ಐಟಂ 2 ಮತ್ತು 7 ರ ಆಸ್ತಿಯು ತಮ್ಮ ಸ್ವಯಾರ್ಜಿತ ಸ್ವತ್ತಾದ ಕಾರಣ ದಿನಾಂಕಃ 29.02.2008 ರಂದು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ

ಕ್ರಯಪತ್ರಕ್ಕೆ 1 ನೇ ಪ್ರತಿವಾದಿ ಸುಂದಶೆಟ್ಟಿ ಹಾಗೂ ಅವರ ತಂದೆ ಎ ಎ ಎಂ ಮಸಣಶೆಟ್ಟಿ ಹಾಗೂ 1 ನೇ ಪ್ರತಿವಾದಿಯ ಚಿಕ್ಕಪ್ಪ ಸಿದ್ಧಪ್ಪಸ್ವಾಮಿಯು ಲಿಖಿತ ಒಪ್ಪಿಗೆ ನೀಡಿರುತ್ತಾರೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ನಂದಿನಿ ಎಂ.ಎನ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ.